**ಸಾಕ್ಷಿಯನ್ನು ದಿಃ18.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ದಾವಾ ಸ್ವತ್ತು ನನಗೆ ಗೊತ್ತು. ಸದರಿ ಸ್ವತ್ತು ದಿಃ 25.01.1999 ರಲ್ಲಿ ಪಿರಿಯಪಟ್ಟಣದ ಇ.ಒ ರವರಿಂದ ವಾದಿ ಗೌರಮ್ಮ ರವರಿಗೆ ಮಂಜೂರಾಗಿದೆ ಎಂದರೆ ಸರಿಯಲ್ಲ.

2. ದಾವಾ ಸ್ವತ್ತು ಈಗಲೂ ಗೌರಮ್ಮ ರವರ ಹೆಸರಿಗೆ ಎಂದರೆ ಸರಿಯಲ್ಲ.

3. ದಾವಾ ಸ್ವತ್ತಲ್ಲಿ ಈಗಲೂ ಗೌರಮ್ಮ ರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

4. ನಾನು ವಿದ್ಯಾಭ್ಯಾಸ ಮಾಡಿಲ್ಲ.

5. ಗೌರಮ್ಮ ರವರ ಹೆಸರಿನಲ್ಲಿ ಸಾಗುವಳಿ ಪತ್ರ, ಇ ಸ್ವತ್ತು ಹಾಗೂ ಅಸ್ಸೆಸ್ಮೆಂಟ್ ಇವೆ ಎಂದರೆ ಸುಳ್ಳು ಅವು ಫೋರ್ಜರಿ ಎಂದು ನುಡಿಯುತ್ತಾರೆ. ಫೋರ್ಜರಿ ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇವೆ ಎಂದರೆ, ಹಾಜರುಪಡಿಸಿದ್ದೇವೆ. ನೀವು ಆ ಬಗ್ಗೆ ಯಾವುದೇ ದಾಖಲೆ ನೀಡಿಲ್ಲ ಎಂದರೆ, ನೀಡಿದ್ದೇವೆ.

6. ದಾವಾ ಸ್ವತ್ತಲ್ಲಿ ಗೌರಮ್ಮ ಸ್ವಾಧೀನದಲ್ಲಿದ್ದು, ಅವರಿಗೆ ಮಂಜೂರಾಗಿದ್ದು ಅವರ ಹೆಸರಿನಲ್ಲಿ ದಾಖಲೆಗಳು ಇದ್ದರೂ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

7. ವಾದಿ ಸ್ವಾಧೀನದಲ್ಲಿರುವಾಗ ದಿಃ 27.01.2019 ರಲ್ಲಿ 9-30 ರ ಸಮಯದಲ್ಲಿ ನೀವು ಹಾಗೂ ಉಳಿಕೆ ಪ್ರತಿವಾದಿಗಳು ಎಲ್ಲರೂ ಸೇರಿ ಅವರ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದೀರಾ ಎಂದರೆ, ಇಲ್ಲ ಅವರೇ ನಮಗೆ ತೊಂದರೆ ಕೊಟ್ಟಿರುತ್ತಾರೆ.

8. ನೀವು ತೊಂದರೆ ಕೊಟ್ಟು ಹಲ್ಲೆ ಮಾಡಿದ್ದಕ್ಕೆ ಪಿರಿಯಾಪಟ್ಟಣ ಠಾಣೆಯಲ್ಲಿ ನಿಮ್ಮ ಮೇಲೆ ಒಂದು ಕ್ರಿಮಿನಲ್ ಪ್ರಕರಣ ಆಗಿದೆ ಎಂದರೆ ದಾಖಲಾಗಿತ್ತು ಎಂದು ನುಡಿಯುತ್ತಾರೆ. ಆಗ ಪೊಲೀಸರು ಸಿವಿಲ್ ದಾವೆ ಹಾಕುವಂತೆ ಹೇಳಿದ್ದರಿಂದ ವಾದಿ ನಿಮ್ಮ ಮೇಲೆ ಈ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ.

9. ಆ ಸಲುವಾಗಿ 2019 ರ ಆಗಸ್ಟ ಮೊದಲ ವಾರದಲ್ಲಿ ಪಂಚಾಯತಿ ಸಹ ಆಗಿತ್ತು ಎಂದರೆ ಸುಳ್ಳು.

10. ಗೌರಮ್ಮ ರವರಿಗೆ ಈಗ ಸುಮಾರು 90 ವರ್ಷ ವಯಸ್ಸು ಎಂದರೆ ಸರಿ. ಸದರಿಯವರನ್ನು ಹೆದರಿಸಿ ನೀವು ತೊಂದರೆ ನೀಡಿದರೆ ಸ್ವತ್ತನ್ನು ನಿಮಗೆ ಕೊಡುತ್ತಾರೆ ಎಂದು ತಿಳಿದು ತೊಂದರೆ ಕೊಡುತ್ತಿದ್ದೀರಾ ಎಂದರೆ, ಸುಳ್ಳು.

11. ದಾವಾ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು ಮಾಲೀಕತ್ವ ಹಾಗೂ ಸ್ವಾಧೀನ ಇಲ್ಲ ಎಂದರೆ ಸುಳ್ಳು.

12. ವಾದಿ ಸುಳ್ಳು ದಾಖಲೆ ಮಾಡಿಕೊಂಡಿದ್ದಾರೆ ಎಂದು ನೀವು ಯಾವುದಾದರೂ ಕೇಸ್ ಹಾಕಿದ್ದೀರಾ ಎಂದರೆ, ಇಲ್ಲ.

13. 1 ನೇ ಪ್ರತಿವಾದಿ ಸ್ವಾಮಿನಾಯಕ ಎಂದರೆ ನನ್ನ ಪತಿ. ಅವರಿಗೆ ಮಂಜೂರಾಗಿದ್ದ ನಿವೇಶನವನ್ನು ಅವರು ನಂದಿನಾಥಪುರದ ಅವರ ತಂಗಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಮಾರಾಟ ಮಾಡಿದ ನಂತರ ನೀವು ಪಂಚಾಯತಿಯವರೊಂದಿಗೆ ಶಾಮೀಲಾಗಿ ನೀವು ಇನ್ನೊಂದು ಹಕ್ಕುಪತ್ರ ಪಡೆದಿರುತ್ತೀರಾ ಎಂದರೆ ಸರಿಯಲ್ಲ.

14. ವಾದಿ ಸ್ವಾಧೀನದಲ್ಲಿರುವ ನಿವೇಶನದ ಪೂರ್ವಕ್ಕೆ: ನಿವೇಶನ ನಂ.6 ಎಂದರೆ ಸುಳ್ಳು. ಪಶ್ಚಿಮಕ್ಕೆ ಖಾಲಿ ಜಾಗ ಎಂದರೆ ಸುಳ್ಳು. ಉತ್ತರಕ್ಕೆ: ನಿವೇಶನ ನಂ.1 ಎಂದರೆ ಸುಳ್ಳು, ದಕ್ಷಿಣಕ್ಕೆ ರಸ್ತೆ ಎಂದರೆ ಸುಳ್ಳು.

15. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು.

16. ಲಿಖಿತ ಹೇಳಿಕೆಯಲ್ಲಿ ನಿವೇಶನ ನಂಬರ್ 9 ಎಂದು ಬರೆಸಿದ್ದೇವೆ. ಅದಕ್ಕೆ ಚಕ್ಕುಬಂದಿ ಗೊತ್ತು. ಪೂರ್ವಕ್ಕೆ: ಬೇರೆಯವರ ಖಾಲಿ ನಿವೇಶನ, ಪಶ್ಚಿಮಕ್ಕೆ: ಬೇರೆಯವರ ಖಾಲಿ ನಿವೇಶನ, ಉತ್ತರಕ್ಕೆ: ಬೇರೆಯವರ ಖಾಲಿ ನಿವೇಶನ, ದಕ್ಷಿಣಕ್ಕೆ: ರಸ್ತೆ ಇದೆ.

17. ನನ್ನ ನಿವೇಶನದ ಖಾತೆ ನಂಬರ್ ಹಾಗೂ ಜಂಜರ್ ನಂಬರ್ ನನಗೆ ಗೊತ್ತಿಲ್ಲ, ಬರೆಸಿದ್ದೇನೆ.

18. ನಿಮ್ಮ ಹಾಗೂ ಗೌರಮ್ಮ ರವರ ಆಸ್ತಿ ಬೇರೆ ಬೇರೆ ಎಂದರೆ ಸುಳ್ಳು, ನಮ್ಮ ಆಸ್ತಿಗೆ ಹಾಕಿದ್ದಾರೆ ಎಂದು ನುಡಿಯುತ್ತಾರೆ.

19. ದಾವಾ ಆಸ್ತಿ ಸರ್ಕಾರದಿಂದ ನನ್ನ ಪತಿ ಸ್ವಾಮಿನಾಯಕ ರವರಿಗೆ ಕೊಟ್ಟಿರುತ್ತಾರೆ.

20. ನಿಮ್ಮ ಪತಿಗೆ ಹಾಗೂ ವಾದಿಗೆ ಒಂದೇ ದಿನ ಬೇರೆ ಬೇರೆ ನಿವೇಶನಗಳನ್ನು ಕೊಟ್ಟಿದ್ದಾರೆ ಎಂದರೆ, ಸುಳ್ಳು.

21. ನೀವು ಹೇಳುವ ಚಕ್ಕುಬಂದಿ ಹಾಗೂ ನೀವು ಹಾಜರುಪಡಿಸಿದ ದಾಖಲೆಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

22. ನಮ್ಮ ನಿವೇಶನ ವಿಸ್ತೀರ್ಣ 30*40 ಇದೆ. ಪೂರ್ವ ಪಶ್ಚಿಮ ಎಷ್ಟು ಎಂದರೆ ನನಗೆ ಓದಲು ಬರುವುದಿಲ್ಲ. ನಿಮಗೆ ಓದಲು ಬರೆದೇ ಇರುವ ಕಾರಣ ದಾಖಲೆಗಳಲ್ಲಿರುವ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

23. ನೀವು ಹಾಜರುಡಿಸಿದ ದಾಖಲೆಗಳು ಸೃಷ್ಟಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ